1

# ಎಲ್ಲರ ಕನ್ನಡ...

- ಆಡಳಿತ ಕನ್ನಡದ ಉದಾಹರಣೆಯನ್ನು ತೆಗೆದುಕೊಂಡರೆ 18–19ನೇ ಶತಮಾನದ ಆಡಳಿತ ಕನ್ನಡದಲ್ಲಿ ಉರ್ದು, ಅರೇಬಿಕ್ ಪದಗಳ ಹೆಚ್ಚಿದ್ದವು. ಇವು ಜನರ ಬಳಕೆಗೂ ಒಗ್ಗಿದ್ದವು. ಆದರೆ 20ನೇ ಶತಮಾನದಲ್ಲಿ ಆಡಳಿತ ಕನ್ನಡ ಪದಕೋಶದಲ್ಲಿ ಸಂಸ್ಕೃತ ನೆಲೆಗೊಳಿಸಲಾಯಿತು. ಹೀಗೆ ಕ್ಲಿಷ್ಟ ಕನ್ನಡ ಅನ್ನೋದು ಸ್ಟೇಟ್ ಸ್ಪಾನ್ಸರ್‌ನಂತೆ ತೋರುತ್ತದೆ. ಇದೊಂದು ಸರ್ಕಾರಗಳ ಗುಪ್ತ ಅಜೆಂಡಾ ಆಗಿದೆಯೆಂದು ನೀವು ಭಾವಿಸುತ್ತೀರಾ?
**ಮೇಲಿನ ಅನಿಸಿಕೆಯೂ ಇದಕ್ಕೆ ಕಾರಣವಿರಬಹುದಲ್ಲವೇ? ಇದಲ್ಲದೆ, ಕನ್ನಡದಲ್ಲಿ ತಯಾರಾಗಿರುವ ಯಾವುದೇ ಪದಕೋಶವನ್ನು ನೋಡಿ, ಅದರಲ್ಲಿ ಹೊಸಪದಗಳನ್ನು ಉಂಟುಮಾಡಬೇಕಾದಾಗಲೆಲ್ಲ ಸಂಸ್ಕೃತವನ್ನೇ ಮರೆಹೊಗುವುದನ್ನು ಕಾಣಬಹುದು. ಸಂಸ್ಕೃತದಲ್ಲಿ ತಮಗೆ ಬೇಕಾಗಿರುವ ಪದ ಇಲ್ಲದಿದ್ದರೆ, ಅದರಲ್ಲೇ ಹೊಸ ಪದವನ್ನು ಉಂಟುಮಾಡಲು ಹೋಗುತ್ತಾರಲ್ಲದೆ, ಕನ್ನಡದಲ್ಲಿ ಹೊಸ ಪದವನ್ನು ಉಂಟುಮಾಡಲು ಹೋಗುವುದೇ ಇಲ್ಲ. ಸಂಸ್ಕೃತವನ್ನು ಬಿಟ್ಟರೆ ಬೇರೆ ದಾರಿಯೇ ಇಲ್ಲ ಎಂಬುದಾಗಿ ಅವರು ತಿಳಿದಿರುವ ಹಾಗಿದೆ. ಈ ಅನಿಸಿಕೆಯನ್ನೂ ಇವತ್ತು ನಾವು ಹೋಗಲಾಡಿಸಬೇಕಾಗಿದೆ. ಇನ್ನು ಕೆಲವರಿಗೆ ಸಂಸ್ಕೃತದಲ್ಲಿರುವ ಎಲ್ಲಾ ಪದಗಳೂ ಕನ್ನಡ ಪದಗಳೇ!**

- ಸಾಮಾನ್ಯರ ಆಡುನುಡಿಯಲ್ಲಿ ಹೆಚ್ಚು ಬಳಕೆ ಇರುವ ಇಂಗ್ಲಿಶ್ ಶಬ್ದಗಳನ್ನು ಬರಹದಲ್ಲಿ ಬಳಸುವುದರ ಬಗ್ಗೆ ನೀವೇನು ಹೇಳ್ತೀರಿ?
**ಬೇರೆ ಯಾವ ನುಡಿಯ ಪದಗಳನ್ನು ಬೇಕಿದ್ದರೂ ಬಳಸಿ; ನಾನು ಬೇಡವೆಂದು ಹೇಳುವುದಿಲ್ಲ; ಆದರೆ ಅದಕ್ಕೊಂದು ಮಿತಿ ಬೇಕು. ನೂರಕ್ಕೆ ಅಯ್ವತ್ತಕ್ಕಿಂತಲೂ ಹೆಚ್ಚು ಬೇರೆ ನುಡಿಯ ಪದಗಳನ್ನು, ಅದರಲ್ಲೂ ಇಂಗ್ಲಿಶ್ ಇಲ್ಲವೇ ಸಂಸ್ಕೃತದಂತಹ ಬೇರೆ ಒಂದೇ ನುಡಿಯ ಪದಗಳನ್ನು ಬಳಸಿರುವ ಪದಕೋಶ ಇಲ್ಲವೇ ಬರಹ ಕನ್ನಡದ್ದೇ ಅಲ್ಲ ಎಂಬುದು ನನ್ನ ಅನಿಸಿಕೆ.**

- ವಿಜ್ಞಾನ, ತಂತ್ರಜ್ಞಾನ, ವಾಣಿಜ್ಯ ವಿಷಯಗಳನ್ನು ಕನ್ನಡದಲ್ಲಿ ಹೇಳಲು ಆಗುವುದಿಲ್ಲ, ಇದಕ್ಕೆ ಇಂಗ್ಲಿಷ್ ಪದಗಳು ಬೇಕೇ ಬೇಕು ಎಂಬುದಕ್ಕೆ ನಿಮ್ಮ ಸಮಾಧಾನವೇನು? ಅಚ್ಚಗನ್ನಡ ಪದಗಳನ್ನು ರೂಪಿಸುವುದಕ್ಕೆ ಎಂತಹ ವ್ಯವಸ್ಥೆ ಬೇಕು? ಯಾರು ಮಾಡಬೇಕು (ವ್ಯಕ್ತಿ, ಸಂಘಟನೆ, ಸರ್ಕಾರ ಇತ್ಯಾದಿ)
**ಯಾವ ವಿಶಯದ ಮೇಲೂ ಕನ್ನಡದಲ್ಲಿ ಬರೆಯಲು ಬರುತ್ತದೆ; ಆದರೆ, ಯಾವುದೇ ಒಂದು ವಿಶಯದ ಕುರಿತಾಗಿಯೂ ಆಳವಾದ ತಿಳುವಳಿಕೆಯನ್ನು ಕೊಡಬೇಕಾದರೆ, ಹಲವು ಹೆಚ್ಚಿನ ಅರಿಮೆಯ ಪದಗಳು ಬೇಕಾಗುತ್ತವೆ; ಒಂದು ನುಡಿಯಲ್ಲಿ ಅಂತಹ ಪದಗಳು ಈಗಾಗಲೇ ಬಳಕೆಯಲ್ಲಿ ಬಂದಿಲ್ಲವಾದರೆ, ಅವನ್ನು ಹೊಸದಾಗಿ ಉಂಟುಮಾಡಿಕೊಳ್ಳಬೇಕಾಗುತ್ತದೆ; ಇದು ಎಲ್ಲಾ ನುಡಿಗಳೂ ಎದುರಿಸಬೇಕಾಗುವ ತೊಂದರೆ. ಇಂಗ್ಲಿಶ್‌ನಲ್ಲಿ ಇವತ್ತೂ ಸಾವಿರಾರು ಹೊಸ ಪದಗಳನ್ನು ದಿನಾಲೂ ಉಂಟುಮಾಡುತ್ತಿರುತ್ತಾರೆ. ಕನ್ನಡದಲ್ಲೂ ಇದು ನಡೆಯುತ್ತಿರಬೇಕು. ಇದು ನಡೆಯಬೇಕೆಂಬ ಅನಿಸಿಕೆಯಿರುವವರು ತಾವಾಗಿ ಇದನ್ನು ನಡೆಸಬಹುದು, ಹಲವರು ಒಟ್ಟು ಸೇರಿ ನಡೆಸಬಹುದು, ಇಲ್ಲವೇ ಸರಕಾರ ನಡೆಸುವಂತೆ ಒತ್ತಾಯ ಹೇರಲು ಹೋಗಬಹುದು.**

- ಕನ್ನಡಕ್ಕೆ ಎಲ್ಲವನ್ನೂ ಜೀರ್ಣಿಸಿಕೊಳ್ಳುವ ಸಾಮರ್ಥ್ಯವಿದೆ (ಅನಂತಮೂರ್ತಿ ಅವರ ಜೀರ್ಣಾಗ್ನಿ ಚಿಂತನೆ ). ಅದು ತನ್ನ ಸ್ವಂತಿಕೆಯನ್ನು ಕಳೆದುಕೊಳ್ಳದು ಎಂಬುದಕ್ಕೆ ತಿರುಳು ಇದೆಯೇ?
**ಅರಗಿಸಿಕೊಳ್ಳುವ ಕೆಲಸವೇ ಇವತ್ತು ಕನ್ನಡ ಬರಹಗಳಲ್ಲಿ ನಡೆಯುತ್ತಿಲ್ಲವಲ್ಲ? ನೋಡಿ: ಹಳೆಗನ್ನಡದಲ್ಲಿ ನೂರಾರು ಸಂಸ್ಕೃತ ಪದಗಳನ್ನು ತದ್ಭವ ಪದಗಳನ್ನಾಗಿ ಮಾರ್ಪಡಿಸಿಕೊಂಡರು; ಹಾಗೆ ಮಾರ್ಪಡಿಸುವುದು ತಪ್ಪೆಂದು ಆವತ್ತು ಯಾರೂ ಹೇಳಿರುವ ಹಾಗೆ ಕಾಣಿಸುವುದಿಲ್ಲ; ಹಾಗೆ ಮಾಡುವುದರಿಂದ ಕನ್ನಡದ ಕನ್ನಡತನ ಉಳಿಯುತ್ತದೆ ಎಂಬುದಾಗಿ ಆಂಡಯ್ಯ ಹೇಳಿದ್ದ. ಆದರೆ, ಇವತ್ತು ಸಂಸ್ಕೃತ ಪದಗಳನ್ನು ತುಸುವೂ ಮಾರ್ಪಡಿಸದೆ ಬರೆಯಬೇಕೆಂದು ಶಾಲೆಗಳಲ್ಲಿ ಹೇಳಿಕೊಡಲಾಗುತ್ತದೆ. ಮಾರ್ಪಡಿಸಿದರೆ ಅದು ತಪ್ಪೆಂದು ನಮಗೆ ಅನಿಸುತ್ತದೆ. ನಿಜಕ್ಕೂ ನನ್ನ 'ಹೊಸಬರಹ' ಕನ್ನಡಕ್ಕೆ ಬೇಕಾಗಿರುವ ಇಂತಹದೊಂದು ಅರಗಿಸಿಕೊಳ್ಳುವ ಕೆಲಸವನ್ನು ನಡೆಸುತ್ತದೆ.**

- ಕನ್ನಡ ಬರಹ ಎಲ್ಲರ ಸೊತ್ತಾಗಬೇಕು ಎಂಬ ಕಳಕಳಿಯಿಂದ ನೀವು ಅದರ ಸುಧಾರಣೆಗೆ ಅನೇಕ ಪರಿಹಾರಗಳನ್ನು ಸೂಚಿಸಿದ್ದೀರಿ? (ಕನ್ನಡ ಬರಹವನ್ನು ಸರಿಪಡಿಸೋಣ, ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ, ಕನ್ನಡ ವ್ಯಾಕರಣ ಏಕೆ ಬೇಕು?) ಇವು ಜಾರಿಗೆ ಬರುವುದಕ್ಕೆ ಇರುವ ತೊಡಕುಗಳೇನು? ಇದನ್ನು ಬಗೆಹರಿಸುವುದಕ್ಕೆ ಯಾವ ಉಪಾಯಗಳನ್ನು ಸೂಚಿಸುತ್ತೀರಿ? ಜಾರಿ ಹೊಣೆಗಾರಿಕೆ ಯಾರು ಯಾರು ಹೊರಬೇಕು?
**ನಾನು ಹೇಳುತ್ತಿರುವುದು ಸರಿ ಎಂದು ಅನಿಸುವವರಿಗೆ ನಾನು ಈ ಕೆಲಸವನ್ನು ಬಿಟ್ಟುಕೊಟ್ಟಿದ್ದೇನೆ.**

- ನೀವು ಹತ್ತಾರು ಭಾಷೆಗಳ ವ್ಯಾಕರಣಗಳನ್ನು ಅಧ್ಯಯನ ಮಾಡಿದ್ದೀರಿ. ಭಾಷೆಗಳನ್ನು ಸುಲಭಗೊಳಿಸುವ ಪ್ರಯತ್ನಗಳಿಗೆ ಸಂಬಂಧಿಸಿದಂತೆ ಜಾಗತಿಕ ಸನ್ನಿವೇಶ ಹೇಗಿದೆ ?
**ನಾನು ಎಲ್ಲಿಯೂ ಕನ್ನಡ ನುಡಿಯನ್ನು ಬದಲಾಯಿಸಬೇಕೆಂದು ಹೇಳಿಲ್ಲ; ಕನ್ನಡ ಬರಹವನ್ನು, ಕನ್ನಡದ ಮೇಲೆ ಬರೆದಿರುವ ವ್ಯಾಕರಣವನ್ನು, ಮತ್ತು ಕನ್ನಡ ಬರಹದಲ್ಲಿ ಬಳಕೆಯಾಗುವ ಲಿಪಿಯನ್ನು ಸರಿಪಡಿಸಬೇಕೆಂದಶ್ಟೇ ಹೇಳಿದ್ದೇನೆ. ಬರಹ ನಮ್ಮ ಹತೋಟಿಯಲ್ಲಿದೆ; ಆದರೆ ನುಡಿ ನಮ್ಮ ಹತೋಟಿಯಲ್ಲಿಲ್ಲ. ಹಾಗಾಗಿ, ಬರಹವನ್ನು ಬೇಕಾದ ಹಾಗೆ ಬದಲಾಯಿಸಿಕೊಳ್ಳಬಲ್ಲೆವು. ನುಡಿ ಅದರಶ್ಟಕ್ಕೇ ಬದಲಾಗುತ್ತಿರುತ್ತದೆ.**



ಪತ್ನಿಯೊಂದಿಗೆ

**ಎಲ್ಲರನ್ನೂ ತಲಪಬೇಕಾಗಿರುವ ವಿಶಯಗಳನ್ನು ಕನ್ನಡದಲ್ಲಿ ಬರೆಯುವಾಗ, ಅದು ಎಲ್ಲರನ್ನೂ ತಲಪುವ ಹಾಗೆ ಮಾಡಬೇಕಲ್ಲವೇ? ಅದಕ್ಕಾಗಿ, ಅವುಗಳಲ್ಲಿ ಆದಶ್ಟು ಹೆಚ್ಚು ಕನ್ನಡದವೇ ಆದ ಪದಗಳನ್ನು ಬಳಸೋಣ, ಅದರ ಲಿಪಿಯನ್ನು ಎಲ್ಲರಿಗೂ ಕಲಿಯಲು ಮತ್ತು ಬಳಸಲು ಸುಳುವಾಗುವ ಹಾಗೆ, ಕನ್ನಡಕ್ಕೆ ಬೇಡದಿರುವ ಕೆಲವು ಬರಿಗೆಗಳನ್ನು ಬಳಸದಿರೋಣ ಎಂದಿಶ್ಟೇ ನಾನು ಹೇಳಿರುವುದು. ಬರಹದ ಲಿಪಿಯನ್ನು ಸರಿಪಡಿಸುವ ಕೆಲಸವನ್ನು ಹಲವು ನುಡಿಗಳು ನಡೆಸಿವೆ ಮತ್ತು ನಡೆಸುತ್ತಿವೆ.**

- ನಮ್ಮ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸನ್ನಿವೇಶಗಳಲ್ಲಿ ಸುಲಭ ಕನ್ನಡವನ್ನು ಬಳಸಬೇಕು ಎನ್ನುವ ತುರ್ತುಗಳನ್ನು ನಿರ್ಮಾಣ ಮಾಡುವುದು ಹೇಗೆ? ನೀವು ಸೂಚಿಸುವ ಉಪಾಯಗಳು ಮತ್ತು ಕಾರ್ಯಸೂಚಿ ಏನು ?
**ಇದಕ್ಕೆ ಉತ್ತರವನ್ನು ಮೇಲೆಯೇ ಕೊಟ್ಟಿದ್ದೇನೆ.**

- ಸರಳ ಕನ್ನಡದ ಹೆಸರಿನಲ್ಲಿ ಸಂಸ್ಕೃತಕ್ಕೆ ಬದಲು ಅಚ್ಚಗನ್ನಡ ಶಬ್ದಗಳನ್ನು ಹೇಳುವಾಗ ಭಾಷೆ ಸುಲಭವಾಗುವ ಬದಲು ಕ್ಲಿಷ್ಟವಾಗುವ ಸಾಧ್ಯತೆ ಇದೆಯೇ?
**ಇವತ್ತಿನ ಕೆಲವು ಓದುಗರಿಗೆ ಹಾಗೆ ಅನಿಸಬಹುದು. ಆದರೆ, ನಮಗೆ ಗೊತ್ತಿರುವ ಪದಗಳನ್ನೇ ಬಳಸಿ ಬರೆದರೆ, ಅದು ಗೊತ್ತಿಲ್ಲದ ಪದಗಳನ್ನು ಬಳಸಿ ಬರೆದ ಬರಹಕ್ಕಿಂತ ಹೆಚ್ಚು ಸಿಕ್ಕಲಾಗುವುದು ಹೇಗೆ?**

- ಕನ್ನಡವನ್ನು ಸಬಲಗೊಳಿಸುವುದೇ ಅದನ್ನು ಸುಲಭಗೊಳಿಸುವುದರ ಮೂಲಕ ಎನ್ನುತ್ತೀರಿ ಆದರೆ ಕನ್ನಡಕ್ಕೆ ಕಸುವು ತುಂಬುವ ಯತ್ನಗಳು ನಮ್ಮ ಆರ್ಥಿಕ, ರಾಜಕೀಯ, ತಂತ್ರಜ್ಞಾನದ ವಲಯಗಳ ಕಡೆಯಿಂದ ನಡೆಯಬೇಕಲ್ಲವೇ?
**ಎಲ್ಲರೂ ಸೇರಿ ನಡೆಸಬೇಕಾಗಿರುವ ಕೆಲಸ ಇದು.**